**ದಿನಾಂಕ 01.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ BS ವಕೀಲರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ದಾವೆಯನ್ನು ಸಾಬಣ್ಣ ದಾಖಲು ಮಾಡಿರುತ್ತಾರೆ. ನನಗೆ ಸೇರಿದ 2 ಎಕರೆ ಜಮೀನು ಹೊನ್ನಕುಣಿ ಗ್ರಾಮದಲ್ಲಿ ಇರುತ್ತದೆ. ದಾವ ಜಮೀನು ಸ.ನಂ.24 ಆಗಿರುತ್ತದೆ. ಸ.ನಂ.24 ಒಟ್ಟು 5 ಎಕರೆ ಇರುತ್ತದೆ. ಸ.ನಂ.24 ವಾದಿ ಸಾಬಣ್ಣನಿಗಿಂತ ಮೊದಲು ಆತನ ತಾತನಾದ ಹನುಮಂತನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಹನುಮಂತನ ನಂತರ ಸದರಿ ಸ್ವತ್ತು ವಾದಿಯ ತಂದೆ ಭೀಮಣ್ಣನ ಹೆಸರಿಗೆ ಮುಟೇಶನ ಆಗಿರುತ್ತದೆ. ಭೀಮಣ್ಣನ ಮರಣದ ನಂತರ ವಾದಿ ಸಾಬಣ್ಣ ಮತ್ತು ಆತನ ತಾಯಿ ಹೆಸರಿನಲ್ಲಿ ಮುಟೇಶನ ಆಗಿರುತ್ತದೆ. ಭೀಮಣ್ಣನ ಮರಣದ ನಂತರ 1997 ರಲ್ಲಿ ಭೀಮಣ್ಣನ ಹೆಂಡತಿ ಮಕ್ಕಳ ನಡುವೆ ವಿಭಾಗ ಆಗಿದ್ದರಿಂದ ಎಲ್ಲರೂ ಸಾಬಣ್ಣನ ಹೆಸರಿಗೆ ಮುಟೇಶನ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದ ನಂತರ ಜಮೀನಿನ ನಡುವಿನ ಪಟ್ಟಿ 2 ಎಕರೆಯನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿ. ಸದರಿ ಮಧ್ಯದ ಮಾರಾಟ ಮಾಡಿದ 2 ಎಕರೆ ಜಮೀನಿನ ಪೂರ್ವಕ್ಕೆ 1 ಎಕರೆ 38 ಗುಂಟೆ ಮತ್ತು ಪಶ್ಚಿಮಕ್ಕೆ 2 ಎಕರೆ ಜಮೀನು ಇದೆ ಎಂದರೆ ಸರಿ. 2 ಎಕರೆ ಜಮೀನು ಮಾರಾಟ ಮಾಡಿರುವುದನ್ನು ನಾನು ನೋಡಿರುತ್ತೇನೆ. ಸದರಿ 2 ಎಕರೆ ಜಮೀನನ್ನು ಸಾಬಣ್ಣ ಮತ್ತು ಶಾಂತಮ್ಮ ಮಾರಾಟ ಮಾಡಿರುತ್ತಾರೆ. ಸದರಿ ಮಾತುಕತೆ ಶಾಂತಮ್ಮಳ ಮನೆಯಲ್ಲಿ ಆಗಿರುತ್ತದೆ. ಮಾತುಕತೆ ಸಮಯದಲ್ಲಿ ಮಲ್ಲಪ್ಪ ತಂದೆ ಲಿಂಗಪ್ಪ, ಲಕ್ಷ್ಮಮ್ಮ ಗಂಡ ಲಿಂಗಪ್ಪ, ಆದೆಪ್ಪಗೌಡ ಮತ್ತು ಇತರರು ಹಾಜರು ಇದ್ದರು. ಮಾತುಕತೆ ನಡೆದ ದಿನ ಯಾವುದು ಇತ್ತು ಎಂದು ಹೇಳಲು ನೆನಪಿಲ್ಲ. ಸದರಿ ಮಾತುಕತೆಯ ದಿನಾಂಕ, ತಿಂಗಳು ವರ್ಷ ಹೇಳಲು ನೆನಪಿರುವುದಿಲ್ಲ. ಸದರಿ 2 ಎಕರೆ ಮಾರಾಟ ಮಾಡಿದ ಬಗ್ಗೆ ಬಾಂಡ ಪೇಪರ ಮೇಲೆ ಬರೆಯಲಾಗಿದೆ. ಸ್ಟಾಂಪನ್ನು ಯಾರು ಬರೆದಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಸದರಿ ಪತ್ರವನ್ನು ಗ್ರಾಮದಲ್ಲಿ ಬರೆದಿರುತ್ತಾರೆ ಆ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಆ ದಿನ ನಾನು ರಾಯಚೂರಿನಲ್ಲಿ ಇದುದ್ದರಿಂದ ಮಾತುಕತೆ ಸಮಯದಲ್ಲಿ ನಾನು ಇರಲಿಲ್ಲ. ಸದರಿ ಮಾತುಕತೆಯ ಸಮಯದಲ್ಲಿನ ಸಂಗತಿಗಳ ಕುರಿತು ನನಗೆ ವೈಯಕ್ತಿಕ ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ತಮ್ಮ ಹೇಳಿದ್ದರಿಂದ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಮಾತುಕತೆಯ ಸಮಯದಲ್ಲಿ ನಾನು ರಾಯಚೂರಿನಲ್ಲಿ ಇದ್ದು ಆ ಸ್ಥಳದಲ್ಲಿ ಇರಲಿಲ್ಲ

ಎಂದು ಬರೆಸಿರುತ್ತಿಯಾ ಎಂಬ ಪ್ರಶ್ನೆಗೆ ಸಾಕ್ಷಿ ಮಾತುಕತೆ ಆಗಿರುವ ಸಂಗತಿಗಳು ನನಗೆ ಗೊತ್ತು ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವ್ಯವಹಾರದಲ್ಲಿ ಹಣ ಕೊಟ್ಟಿರುವುದನ್ನು ನಾನು ನೋಡಿರುವುದಿಲ್ಲ. ಸದರಿ ಮಾತುಕತೆಯ ಸಮಯದಲ್ಲಿ ಸಾಬಣ್ಣನ ವಯಸ್ಸು 10-15 ವರ್ಷ ಇರಬಹುದು. ನನ್ನ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಸಾಬಣ್ಣ ಮತ್ತು ಆತನ ತಾಯಿ 2 ಎಕರೆ ಜಮೀನು ರೂ.1,60,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿಫಲದ ಹಣವನ್ನು ಸಾಬಣ್ಣ ಮತ್ತು ಅವರ ತಾಯಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಗ್ರಾಮದಲ್ಲಿ ಖರೀದಿ ಕುರಿತು ಸ್ಟ್ಯಾಂಪ ಮೇಲೆ ಬರೆಯಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತ ಖರೀದಿ ಮಾಡಿದಾಗನಿಂದ ಆತನೇ ಸ್ವಾಧೀನದಲ್ಲಿ ಇರುತ್ತಾನೆ ಎಂದು ಸುಳ್ಳು ಬರೆಸಿರುತ್ತೇನ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಹನುಮಂತ ದಿನಾಂಕ 25.11.2006 ರಲ್ಲಿ 2 ಎಕರೆ ಜಮೀನನ್ನು ವಾದಿಗಳಿಗೆ ತಿಳಿಯದಂತೆ ವಿಭಾಗದಲ್ಲಿ ಬಂದಿರುತ್ತದೆ ಎಂದು ಸುಳ್ಳು ಮುಟೇಶನ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿಗೆ ತಿಳಿಯದಂತೆ 2019 ರಲ್ಲಿ 1 ನೇ ಪ್ರತಿವಾದಿ ತನ್ನ ಹೆಸರಿಗೆ ಖೊಟ್ಟಿ ಮುಟೇಶನ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಈಗಲೂ ದಾವ ಸ್ವತ್ತಿನ್ನ ಮಾಲೀಕ ಕಬ್ಜೆದಾರನು ಆಗಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.